# ಸಿಗ್ನಲ್ ನೆಟ್‌ವರ್ಕ್ಸ್: ಹೊಸ ಟೆಲಿಕಾಂ ಉಪಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಟರ್‌ನೆಟ್, ಸ್ಥಿರ ದೂರವಾಣಿ ಹಾಗೂ ಮೊಬೈಲ್ ಸೇವೆಯನ್ನು ಒಂದೇ ವ್ಯವಸ್ಥೆಯಡಿ ಕಲ್ಪಿಸುವ ಇಂಟಿಗ್ರೇಟೆಡ್ ಕಮ್ಯುನಿಕೇಷನ್ಸ್ ಮ್ಯಾನೇಜರ್ (ಐಸಿಎಂ) ಉಪಕರಣವನ್ನು ಬೆಂಗಳೂರು ಮೂಲದ ಸಿಗ್ನಲ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಆವಿಷ್ಕರಿಸಿದೆ.

ನಗರದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಂಪೆನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಮಲ್ಯ, ಈ ಹೊಸ ಉಪಕರಣ ಸಣ್ಣ ಉದ್ಯಮಿದಾರರಿಗೆ ಹಾಗೂ ಕಂಪೆನಿಗಳಿಗೆ ಹೆಚ್ಚು ಪ್ರಯೋಜನಕಾರಿ ಎಂದರು.

ದೂರವಾಣಿ ಸಂಪರ್ಕ ಹಾಗೂ ಇಂಟರ್‌ನೆಟ್ ಸಂಪರ್ಕ ಪಡೆಯಲು ಬಳಸಲಾಗುವ ವಿವಿಧ ಪರಿಕರಗಳ ಬದಲಿಗೆ ಐಸಿಎಂ ಒಂದೇ ಉಪಕರಣ ಬಳಸಿದರೆ ಸಾಕು. ಇದರಿಂದ ಕಂಪೆನಿಗೆ ವೆಚ್ಚ ಕೂಡ ತಗ್ಗುತ್ತದೆ ಹಾಗೂ ಗ್ರಾಹಕರಿಗೂ ಸಮರ್ಪಕ ಸೇವೆ ದೊರಯುತ್ತದೆ ಎಂದರು.

ದೂರಸಂಪರ್ಕ ಕಂಪೆನಿಗಳಿಗೂ ಇದು ಹೆಚ್ಚು ಪ್ರಯೋಜನಕಾರಿ. ದೂರವಾಣಿ, ಮೊಬೈಲ್ ಹಾಗೂ ಬ್ರಾಡ್‌ಬ್ಯಾಂಡ್ ಸೇವೆ ನೀಡಲು ವಿವಿಧ ಉಪಕರಣಗಳನ್ನು ಬಳಸುವ ಬದಲಿಗೆ ‘ಐಸಿಎಂ’ ಉಪಯೋಗಿಸಿದರೆ ಇವೆಲ್ಲ ಸೇವೆಗಳನ್ನು ಒಂದೇ ವೇದಿಕೆಯಡಿ ಕಲ್ಪಿಸಬಹುದಾಗಿದೆ.

ಇದರಲ್ಲಿ ಐಪಿ ರೂಟಿಂಗ್, ಪಿಬಿಎಕ್ಸ್, ರಿಮೋಟ್ ಮಾನಿಟರಿಂಗ್, ಫೈರ್‌ವಾಲ್, ಪ್ರಾಕ್ಸಿ, ಐಪಿ ಸೆಕ್ಯುರಿಟಿ ಸೇರಿದಂತೆ ವಿವಿಧ ಸೌಲಭ್ಯಗಳಿವೆ.

ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಇವುಗಳನ್ನು ಅಳವಡಿಸಬಹುದಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಇಂಟಿಗ್ರೇಟೆಡ್ ಮೊಬೈಲ್ ಗೇಟ್‌ವೇ (ಐಎಂಜಿ) ಉಪಕರಣವನ್ನು ಬಿಡುಗಡೆ ಮಾಡಲಾಯಿತು.

ಇದು ಸ್ಥಿರ ದೂರವಾಣಿ ಕರೆಗಳನ್ನು ಮೊಬೈಲ್‌ಗೆ, ಮೊಬೈಲ್ ಕರೆಗಳನ್ನು ಸ್ಥಿರ ದೂರವಾಣಿಗೆ ವರ್ಗಾಯಿಸುತ್ತದೆ. ಇದರಿಂದಾಗಿ ಮುಖ್ಯವಾಗಿ ಕಂಪೆನಿಗಳ ದೂರವಾಣಿ ಕರೆ ವೆಚ್ಚವನ್ನು ತಗ್ಗಿಸಬಹುದಾಗಿದೆ.

**ಕಾರ್ಯನಿರ್ವಹಣೆ:** ಕಂಪೆನಿಯೊಂದಕ್ಕೆ ಗ್ರಾಹಕರು ಕರೆ ಮಾಡಿದರು ಎಂದಿಟ್ಟುಕೊಳ್ಳಿ. ಅವರು ಕರೆ ಮಾಡಲು ಬಳಸಿದ ಮೊಬೈಲ್ ಉದಾಹರಣೆಗೆ ಏರ್‌ಟೆಲ್‌ಗೆ ಸೇರಿದ್ದಾಗಿದ್ದರೆ, ಐಎಂಜಿ ಉಪಕರಣವು ಈ ಕರೆಯನ್ನು ಕಂಪೆನಿಯ ಏರ್‌ಟೆಲ್ ಮೊಬೈಲ್‌ಗೆ ವರ್ಗಾಯಿಸುತ್ತದೆ. ಇದರಿಂದಾಗಿ ಏರ್‌ಟೆಲ್‌ದಿಂದ ಏರ್‌ಟೆಲ್ ಕಂಪೆನಿಯ ಕರೆಗಳು ಕಡಿಮೆ ದರವಿರುವುದರಿಂದ ಗ್ರಾಹರಿಗೆ ಕಡಿಮೆ ವೆಚ್ಚದಲ್ಲಿ ಸಂಪರ್ಕ ಪಡೆಯಲು ಸಾಧ್ಯವಾಗುತ್ತದೆ.

ಇದರಂತೆ ಕಂಪೆನಿಯ ಉದ್ಯೋಗಿಗಳು ಕರೆ ಮಾಡಲು ಸ್ಥಿರ ದೂರವಾಣಿ ಬಳಸಿದರೆ ಇದನ್ನು ಮೊಬೈಲ್ ಕರೆಯಾಗಿ ಐಎಂಜಿ ಬದಲಿಸುತ್ತದೆ.

ಇದರಿಂದಾಗಿ ಮೊಬೈಲ್‌ದಿಂದ ಮೊಬೈಲ್ ಕರೆ ಅಗ್ಗವಾಗಿರುವುದರಿಂದ ಕಂಪೆನಿಗೆ ದೂರವಾಣಿ ಬಿಲ್ ಕಡಿಮೆ ಬರುತ್ತದೆ ಎಂದು ವಿವರಿಸಿದರು.

---

**ು ಪೇಟೆ**

ways 510.35
184.35
Stainless
Steel 616.25
eel 1080.45
.55
ank 744.2
Isq Fin 924.35
536.4
Infratech 58.3
1769.35
526.65
Seamless
lore Ref 68.55
1230.15
s Infra 187.2
637.65
Baer 60.1
is Bfl 635.35
6.15
C 201.2
.Ferti 103.6
al Alum 395.75

Raymond 211.35
Rcom 136.8
Reliance Capital 635.3
Reliance Ind 998.3
Reliance Natural Resources 46.45
Reliance Power 139.95
Relinfra 965.65
Rolta India 165.35
S
S A I L 201.95
Satyam Comp 84
Sbi 2214.85
Shipping Corp 157.5
Siemens 674.6
Sobha Developers 295.85
Sterling Biotech 112.4
Sterlite Ind 637.5
Sterlite Optical 97.65
Sun Pharma 1557
Suntv 415.05
Suzlon Energy 59.9
Syndicate Bnk 88.05
T,U,V
Tata Chem 330.5
Tata Elxsi 256.55